138(2)

Regd No BG 155

— ೨೬ —

16—4—1962

Sri "SATYAVADI"
— DAILY —
MYSORE4
46 th Year

ಸತ್ಯವಾದಿ
SATYAVADI

ಪ ಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿದಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ನೇಪಾಳದಲ್ಲಿ ಪ್ರತಿ ಸರ್ಕಾರದ ರಚನೆ ಬೆದರಿಕೆ

ದೊರೆ ವಿಹೇಂದ್ರವರು ನಿರಂಕುಶಾಧಿಕಾರವನ್ನು ಮುಂದುವರಿಸಿದರೆ, ನೇಪಾಳದ ಯಾವುದೋ ಭಾಗದಲ್ಲಿ ಪ್ರತಿ ಸರ್ಕಾರವನ್ನು ಕಾಂಗ್ರೆಸು ಸ್ಥಾಪನೆಮಾಡುವದಾಗಿ ರದ್ದಾದ ನೇಪಾಳ ಪಾರ್ಲಿಮೆಂಟಿನ ಸದಸ್ಯ ಶ್ರೀ ಭತ್ತರಾಯ್ ನಿನ್ನೆ ಡಾರ್ಜಲಿಂಗಿನಲ್ಲಿ ನುಡಿದರು.

ತಿಂಗಳ ಕೊಡದಿರುವಂತೆ ನೇಪಾಳದ ಬಂಡುಗೋರರೇ ರೇಡಿಯೋ ಜನರಿಗೆ ತಿಳಿಸಿದೆ.

ಫೀಜೋ ಬಗ್ಗೆ ವಿವರ

ನಾಗಾ ದಂಗೆಕೋರ ನಾಯಕ ಫೀಜೋರವರು ಸುಮಾರು ಮಾರ್ಚ್ 30 ರ ಸುಮಾರಿನಲ್ಲಿ ಲಂಡನ್ ಬಿಟ್ಟರು ಅವರು ಪೂರ್ವಕ್ಕೆ ವಾ ಖಾಗಿ ನಾಗಾ ರಾಷ್ಟ್ರೀಯ ಪಮಿತಿಯ ರಹಸ್ಯ ಸಭೆಯಲ್ಲಿ ಭಾಂತದ ಖಂಡಿತವಾದ ಸೇನೆಯ ನೀತಿ ಹುರಿತು ಚರ್ಚಿಸಿದರು. ಅನಪೇಕ್ಷಿತ ಅಕ್ರಮಣದ ಬಗ್ಗೆ ಭಾರತದ ವಿರುದ್ಧ ವಿಶ್ವದಾದ್ಯಂತ ಪ್ರಚಾರ ಮಾಡಲು ಅವರು ಅಮೆರಿಕಾಕ್ಕೆ ಹೋಗಲು ಇಚ್ಛಿಸಿರುವರು ಹುಸ್ಸಸಿದ್ಧ ಪತ್ರಿಕೋದ್ಯೋಗಿಯೊಡನೆ ಜಿನೀವಾ ಮಾರ್ಗವಾಗಿ ಫೀಜೋ ಪೂರ್ವ ಪಾಕಿಸ್ತಾನಕ್ಕೆ ತೆರಳಿದ್ದರೆಂದು ಗೊತ್ತಾಗಿದೆ ಎಂದು ಲಂಡನ್ ಪ್ಲಲ್ಲಿ ಜರ್ಜ್ ಪತ್ರಿಕೆ ತಿಳಿಸಿದ್ದಾರೆ

ನಿಜಲಿಂಗಪ್ಪನವರಿಗೆ ಅನುಮತಿ

ವಿಧಾನ ಪರಿಷತ್ ಸದಸ್ಯತ್ವಕ್ಕೆ ನಾಮಕರಣಕ್ಕೆ ಪ್ರಧಾನಮಂತ್ರಿಗಳು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಕೇಂದ್ರ ಪಾರ್ಲಿಮೆಂಟರಿ ಪಮಿತಿ ಅನುಮತಿ ನೀಡಿದೆ ಎಂದು ನವದೆಹಲಿ ವರದಿ ತಿಳಿಸುತ್ತದೆ.

ಎಂಟು ಮಂದಿಗೆ ಗಾಯ

ಮೊನ್ನೆ ರಾತ್ರಿ ಅಲಹಾಬಾದಿನ ನಗರ ಕೊತ್ವಾಲಿ ಮುಂದೆ ಮೂರು ಸಹಸ್ರ ಮಂದಿ ಪುಂಡ ಗುಂಪಿನ ಮೇಲೆ ಪೋಲೀಸರು ಗುಂಡುಹಾರಿಸಲು 8 ಜನ ಗಾಯಗೊಂಡರು. ಆರು ಪೋಲೀಸ್ ಗಳಿಗೆ ಸಣ್ಣಪುಟ್ಟ ಗಾಯವಾಗಿರುವದಾಗಿ ವಂದಿ ಆಗಿದೆ ಬಂದೀಖಾನೆಯಲ್ಲಿ ಹಿಂದಿನ ದಿನ ಟರ್ವನನ್ನು ಹೊಡೆದು ಕೊಲ್ಲಲಾಯಿತೆಂಬ ಅಪವಾದದ ಮೇಲೆ ಕೊತ್ವಾಲಿಯ ಮುಂದೆ ಜನ ಸೇರಿ ಸತ್ತವನ ದೇಹ ಕೊಡುವಂತೆ ಒತ್ತಾಯ ಪಡಿಸುತ್ತಿದ್ದರು. ಕಲ್ಲುಗಳನ್ನು, ಇಟ್ಟಿಗೆ ಚೂರುಗಳನ್ನು ಎಸೆದರು.

ಸಿ. ಪಿ ಸೂಚನೆ

ಕೊಯಮ್ಮತ್ತೂರು ಹಾಗೂ ನೀಲಗಿರಿ ಲಾಯರುಗಳ ಸಮ್ಮೇಳನವನ್ನು ಮೊನ್ನೆ ಡಾ|| ಸಿ ಪಿ ರಾಮಸ್ವಾಮಿ ಅಯ್ಯರರು ಉದಕಮಂಡಲದಲ್ಲಿ ಉದ್ಘಾಟಿಸುತ್ತಾ, ಲಾಯರುಗಳು ಅತುರದ ಶಾಸನವನ್ನು ತಡೆಗಟ್ಟಬೇಕೆಂದು ತಿಳಿಸಿದರು.

ರಾಜೀನಾಮೆ ಒಪ್ಪಿಗೆ

ಕಾಂಗ್ರೆಸು ಅಧ್ಯಕ್ಷತೆಗೆ ಶ್ರೀ ಎಸ್ ನಿಜಲಿಂಗಪ್ಪ ಸಂಜೀವರೆಡ್ಡಿಯವರು ಇತ್ತ ರಾಜೀನಾಮೆಯನ್ನು ಅಖಿಲ ಭಾರತ ಕಾಂಗ್ರೆಸು ಕಾರ್ಯಕಾರಿ ಸಮಿತಿ ಅಂಗೀಕರಿಸಿತೆಂದು ನವದೆಹಲಿ ವಾರ್ತೆ. ಮತ್ತೊಬ್ಬರು ಅಧ್ಯಕ್ಷರು ಆಯ್ಕೆ ಆಗುವವರಿಗೆ ಅವರು ಅಧ್ಯಕ್ಷರಾಗಿರುವರು.

★

ಈ ಮಾಹೆ 16 ರಿಂದ 22 ರವರೆಗೆ ಮೈಸೂರಿನ ಸ್ಟೇಟ್ ವೇರ್‌ಹೌಸಿನಲ್ಲಿ ಸಪ್ತಾಹ ನಡೆಯುವುದು

ಬಂಧನ

ಮೋಟಾರು ಅಪಘಾತ ಮಾಡಿದ ಸಂದರ್ಭದಲ್ಲಿ ತಮ್ಮ ಮಗ ರಾಜಕುಮಾರ ಫರಾಜಂನ್ನು ಎಚ್ಚರಾಣಿಗೆ ಗುರಿಪಡಿಸುವ ಮೊದಲು ಬಂಧಿಸುವಂತೆ ಸಾದಿ ಅರೇಬಿಯಾದ ದೊರೆ ಇಬ್ನ ಸಾದರು ಅಜ್ಞೆ ಇತ್ತರೆಂದು ಅಮ್ಮಾನ್ ವಾರ್ತೆ.

ಹಸಿವಿನಿಂದ ಮರಣ

ಪಶ್ಚಿಮ ಜಾವಾದ ಇಂದ್ರಮಯು ಪ್ರದೇಶದಲ್ಲಿ ಅನ್ನವಿಲ್ಲದೆ 60 ಜನರು ಮರಣಹೊಂದಿದರು ಎಂದು ಜಕಾರ್ತಾ ವಾರ್ತೆ.

ಒಗ್ಗಟ್ಟಾಗಿ

ಕೇಂದ್ರ ಹಾಗೂ ರಾಜ್ಯ ಶಾಸನಸಭೆಗಳಲ್ಲಿರುವ ಕಾಂಗ್ರೆಸ್ಸೇತರ ಪಕ್ಷಗಳು ತಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳದೆ ಕಾಂಗ್ರೆಸನ್ನು ಅಧಿಕಾರದಿಂದ ಸೋಲಿಸಬಹುದೆಂದು ಶ್ರೀ ಪಿ. ರಾಜಗೋಪಾಲಾಚಾರಿಯವರು ಮದ್ರಾಸಿನಲ್ಲಿ ಮೊನ್ನೆ ಸಾರ್ವಜನಿಕ ರ್ಯಾಲಿಯಲ್ಲಿ ತಿಳಿಸಿದರು

೦೦೦

ನಾಡಿದ್ದು ಮಧ್ಯಾಹ್ನ 5 ಗಂಟೆಗೆ ಹುಣಸೂರಿನ ಪುರಸಭೆ ಹೈಸ್ಕೂಲ್ ಗ್ರೌಂಡ್ಸಿನಲ್ಲಿ ಮೈಸೂರು ಜಿಲ್ಲಾಧಿಕಾರಿಯವರಾದ ಶ್ರೀ ಸಸೀರುದ್ದೀನ್ ಅಹಮದರು ನಂ 12 ಲೋಕ ಸಹಾಯಕ ಸೈನಿಕ ಶಿಬಿರವನ್ನು ಉದ್ಘಾಟಿಸುವರು

ಭಾರತ ಸರ್ಕಾರ ಮೊನ್ನೆ ಮತ್ತೆ 4 ಏನಿಸ್ಟರ್ ಆಫ್ ಸ್ಟೇಟ್ಸ್‌ಗಳನ್ನು, 11 ಉಪ ಮಂತ್ರಿಗಳನ್ನು ಪಡೆಯಿತು ಈಗ ಮಂತ್ರಿಮಂಡಲದ ಸಂಖ್ಯೆ 38 ಹಿಂದಿನ ಮಂತ್ರಿ ಮಂಡಲದಲ್ಲಿದ್ದ ಜನರ ಸಂಖ್ಯೆ 47.

ಕಲ್ಲಿದ್ದಲು ಕೈಗಾರಿಕೆ ಬಗ್ಗೆ ಹೊಸ ಬೆಲೆಯ ಪರಿಶೀಲನೆ ಮಾಡುವ ಅಂಶವನ್ನು ಭಾರತ ಸರ್ಕಾರ ಕೈಗೊಂಡಿದೆ

ನೀಫಾದ ನವ ಸಾರಿ ಪ್ರದೇಶದಲ್ಲಿ ಡರೆಕ್ ನದಿ ಪ್ರವಾಹದಲ್ಲಿದೆ.

ವಿವಿಧ ವಿಷಯಗಳು

ಭಾರತ ಕಾಂಗ್ರೆಸು ಕಾರ್ಯಕಾರಿ ಸಮಿತಿ ಅನುಮೋದಿಸಿದೊಡನೆಯೇ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಪದವಿಗೆ ಡಾ|| ಎಸ್ ರಾಧಾಕೃಷ್ಣನ್ ಮತ್ತು ಡಾ|| ಜಕೀರ್ ಹುಸೇನರ ನಾಮಪತ್ರವನ್ನು ಕಾಂಗ್ರೆಸು ನಾಯಕರು ಪಲ್ಲಿಸಿರುವರೆಂದು ನವದೆಹಲಿ ವಾರ್ತೆ.

ಅಣು ಪ್ರಯೋಗ ನಿಶೇಧದ ಒಪ್ಪಂದದ ಬಗ್ಗೆ ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳಲ್ಲಿ ಉಂಟಾಗಿರುವ ಬಿಕ್ಕಟನ್ನು ಬಗೆಹರಿಸಿ ಒಪ್ಪಂದಕ್ಕೆ ಹೊಸ ಪ್ರಯತ್ನ ನಡೆಯುವುದೆಂದು ಜಿನೀವಾ ವಾರ್ತೆ.

ಚಾಮರಾಜ ಮೊಹಲ್ಲಾ ತಿರಿಗೆದಾರರ ಸಂಘದ ಆಶ್ರಯದಲ್ಲಿ ನಿನ್ನೆ ಸಂಘದ ಅಧ್ಯಕ್ಷರಾದ ಡಾ|| ಎಂ ನರಸಿಂಹಯ್ಯ ಪಂಡಿತರವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಡಾ|| ಎಂ. ವಿಶ್ವೇಶ್ವರಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಿಸಿತು

ಕೊಯಮ್ಮತ್ತೂರು ಜಿಲ್ಲೆಯಲ್ಲಿ ಓರ್ವ ಎಂ ಎಂದೀಖಾನೆ ನಿರ್ಮಿಸುವದಾಗಿ ಗೊತ್ತಾಗಿದೆ.

ಭಾರತ-ಚೀನಾ ಗಡಿ ವಿಭಜನೆಗೆ ಸಂಬಂಧಪಟ್ಟಂತೆ ಫೆಬ್ರವರಿ 26 ನೆಯ ತಾ|| ಭಾರತಕ್ಕೆ ಕಳಿಸಿದೆ ಪತ್ರವನ್ನು ನಿನ್ನೆ ಜನತಾ ಚೀನಾದ ರಾಷ್ಟ್ರೀಯ ಸಭೆಯ ರಹಸ್ಯ ಅಧಿವೇಶನ ನಿನ್ನೆ ಅನುಮೋದಿಸಿತೆಂದು ಪೀಕಿಂಗಿನಿಂದ ವಾರ್ತೆ ಬಂದಿದೆ.

ನವ ದೆಹಲಿಯಲ್ಲಿ ಈ ದಿನದಿಂದ ನೂತನ ಪಾರ್ಲಿಮೆಂಟಿನ ಅಧಿವೇಶನ ಆರಂಭವಾಗುವದು ಸದಸ್ಯರು ಪ್ರಮಾಣ ವಚನವನ್ನು ಸ್ವೀಕರಿಸುವರು

ಕೇರಳ ಗವರ್ನರಾಗಿ ಶ್ರೀ ವಿ ವಿ ಗಿರಿಯವರು ಮತ್ತೊಂದು ಅವಧಿಗೆ ಮುಂದುವರಿಯುವರೆಂದು ತಿರುವೇಂದ್ರಂ ವಾರ್ತೆ ತಿಳಿಸುತ್ತದೆ.

ನಾಳೆಯ ಹಂಚಾಂಗ

ಅಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ

ಶ್ರೀಕ್ರೋಧಿ ಉತ್ತರ

ಪ್ರಮುಖ ವೃತ್ತಾಂತಗಳು

ಬ್ರಿಟಿಷರು ಕಳೆದ ವರ್ಷ 364೦೦೦೦೦೦ ರೂಗಳ ಬೆಲೆಯ ಚಾಕೊಲೆಟ್, ಪೆಪ್ಪರ್‌ಮೆಂಟು ಮುಂತಾದ ಸಿಹಿಪದಾರ್ಥ ಸೇವಿಸಿರುವರೆಂದು ಪ್ರಕಟವಾಗಿದೆ.

1970 ರ ಹೊತ್ತಿಗೆ ಬ್ರಿಟನ್ನಿನಲ್ಲಿ 16೦ ಲಕ್ಷ ವಾಹನಗಳಿರುವುವೆಂದು ಜಾರ್ಜ್ ಡೇವಿಸ್ ಹೇಳಿರುವರು

ಬ್ರಿಟನ್ನಿನಲ್ಲಿ ಹೊಗೇಸೇದುವ-ನಿರೋಧ ಮಾತ್ರೆಗಳು ವಿಪರೀತವಾಗಿ ಖರ್ಚಾಗುತ್ತಿದೆ.

ಕಳೆದ ವರ್ಷ ವಿಶ್ವದ ಬಂಗಾರದ ಉತ್ಪತ್ತಿಯು 35೦೦೦೦೦೦ ಔನ್ಸುಗಳೆಂದು ಬ್ರಿಟಿಷ್ ಯೂನಿಯನ್ ಕಾರ್ಪೊರೇಷನ್ನು ಅಂದಾಜುಮಾಡಿದೆ.

ಬ್ರಿಟನಿನ ಮಾಜಿ ಪ್ರಧಾನಿ ಲಾರ್ಡ್ ಜರ್ಚಿಲ್ಲರ ಮಗಳು 47 ವರ್ಷದ ಸಾಂತಾ, 48 ವರ್ಷದ ಲಾರ್ಡ್ ಒಡ್ಡೆಯನ್ನು ಮದುವೆಯಾಗಲಿರುವಳು – ಪುಟ್ಟು ಎಗೆ 3 ನೇ ವಿವಾಹ, ವರನಿಗೆ 2 ನೇ ವಿವಾಹ.

ಕೆಲವು ವರ್ಷಗಳ ಹಿಂದೆ ಬ್ಯಾಕಿವಂತಳಾಗಿದ್ದ ಅಮೇರಿಕಾದ ಸಿನಿಮಾತಾರೆ ವೆರೋನಿಕಾ ಲೇಕ್ ಈಗ ನ್ಯೂಯಾರ್ಕಿನ ಮಾರ್ಕೆಟ್ ವಾಷಿಂಗ್ಟನ್ ಹೋಟಲಿನಲ್ಲಿ ಪರಿಚಾರಿಕೆಯಾಗಿ ಕೆಲಸ ಮಾಡುತ್ತಿದ್ದಾಳೆ.

ಇತಿಹಾಸಿಯಾ ಚಕ್ರವರ್ತಿಗೆ ಮೂರು ಅರಮನೆಗಳಿವೆ : ಅ ವೈಕಿ ಒಂದನ್ನು ನೂತನ ವಿಶ್ವವಿದ್ಯಾಲಯಕ್ಕೆ ಕೊಟ್ಟಿದಾರೆ ; ಈಗ ಪುನಃ ಒಂದು ಅರಮನೆಯನ್ನು 13೦ ಲಕ್ಷ ರೂಗಳ ಖರ್ಚಿನಲ್ಲಿ ಕಟ್ಟಿಸಲಿದ್ದಾರೆ

ಗಂಡಿನ ಅಕಸ್ಮಿಕದಲ್ಲಿ ಕಣ್ಣು ಕಳೆದುಕೊಂಡ ತನ್ನ 15 ವರ್ಷದ ಮಗನಿಗೆ ತನ್ನ ಕಣ್ಣುಗುಡ್ಡೆ ಹಾಕಬೇಕೆಂದು ಅವನ ತಾಯಿ ಇಂಗ್ಲೀಷು ಮಹಿಳೆ 56 ವರ್ಷದ ಜೋಸೆಫೈನ್ ರೀಡ್ ಒಬ್ಬ ವೈದ್ಯನಿಗೆ ತಿಳಿಸಿದಳು

ಥೈಲೆಂಡಿನಿಂದ ಮಲಯಾಕ್ಕೆ ಅಕ್ರಮವಾಗಿ ಒಯ್ದು ವ್ಯಾಪಾರದಲ್ಲಿ ತಂದ 4 ಲಕ್ಷ ರೂಗಳ ಬೆಲೆಯ ಅಫೀಮು ವಶಪಡಿಸಿಕೊಳ್ಳಲ್ಪಟ್ಟಿತು, ಇಬ್ಬರು ದಸ್ಕೆಗಿರಿ ಮಾಡಲ್ಪಟ್ಟರೆಂದು ಕೌಲಾಲಾಂಪೂರ್ ವಾರ್ತೆ ತಿಳಿಸಿದೆ

ಬೊಂಬಾಯಿನಿಂದ ಹೊರಟ 'ವಿಶ್ವನಿಧಿ' ಭಾರತ ಹಡಗಿನಲ್ಲಿ ಅಕ್ರಮವಾಗಿ ತರಲಾಗಿದ್ದ 2660000 ರೂಗಳ ಬೆಲೆಯ ಅಪೀಮನ್ನು ಬ್ರಿಟನ್ನಿಗೆ ಹಡಗು ತಲುಪುವಾಗ ವಶಪಡಿಸಿಕೊಳ್ಳಲಾಯಿತು ; ಈ ಸಂದರ್ಭದಲ್ಲಿ ಇಬ್ಬರಿಗೆ ತಲಾ 6 ತಿಂಗಳು ಸಜ್ಜಾ ವಿಧಿಸಲಾಯಿತು.

ಅಮೇರಿಕಾ ಮಹಿಳೆಯರು ಭಾರತದಲ್ಲಿ ದೊರೆತನ ಸೀರೆಗಳನ್ನು ಏದು ಮಾಡುವರೆಂಬುದನ್ನು ಕುತೂಹಲದಿಂದ ನೋಡುತ್ತಿದ್ದಾರೆ — ಅಮೇರಿಕಾದಲ್ಲಿ ಸೀರೆ ವಾರ ವಿಪರೀತವಾಗಿ ನಡೆಯುತ್ತಿದೆ : ಅದೂ ಗಿರಾಕಿಗಳು ಅದನ್ನು ಭಾರತದ ಶಾಸ್ತ್ರದಾಯಕ ರೀತಿಯಲ್ಲಿ ಉಡದೆ, ಆದರಿಂದ ಶಾಲದ ಫ್ಯಾಷನ್ನಿಗೆ ತಕ್ಕಂತೆ ಉಡುಪುಗಳನ್ನು ಕಯಾರಾಗಿಸಿಕೊಳ್ಳುತ್ತಿರುವರು.

ಪ್ಯಾರಿಸ್ಸಿನ ಪ್ರಸಿದ್ಧ ಫ್ಯಾಷನ್ ಮಾಡಲ್ ವಿಸೆಸ್ ಕವೆರಾನಿಗೆ ವಯಸ್ಸು 4೦ ವರ್ಷ. ಆದರೆ ತನ್ನ ಫೋಟೊಕೂ ಶೈಲಿ 3೦ ವರ್ಷವೆಂದು ಹೇಳಿಕೊಳ್ಳುತ್ತಿದ್ದಳು : ಅವಳು ಫ್ಯಾಶನ್ ಪರೀಕ್ಷೆಗೆ ಪಯಾಣ ಮಾಡಿದಾಗ, ಅವಳಿಗೆ ಕೊಟ್ಟಿದ್ದ ಫ್ಲಾಸ್ಟಿಕ್ ಬೊಂಬೆಯಲ್ಲಿ 4೦ ವರ್ಷ ಎಂದಿದ್ದದ್ದನ್ನು 3೦ ಎಂದು ಅವಳು ತಿದ್ದಿಮುದನ್ನು ಜಮೀನ್ದಾರನ ಗಡಿ ಕಛೇರಿಗೆ ಅಧಿಕಾರಿಗಳು ಪತ್ತೆಮಾಡಲು, ಅವಳು ಮನಸೋಯದು ಪ್ಯಾರಿಸ್ಸಿನ ಪಾಪಸ್ಸು ಒಂದು ಹೋಟಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡಳು.

ವುಡ್‌ಲ್ಯಾಂಡ್ಸ್ ಸ್ತುತ್ಯಾರ್ಹ 10 ನೆ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಾಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ– ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— ಜಯಪ್ರದ 4 ನೇ ವಾರ

ಶಾರದ (ತಮಿಳು)

ಪಾತ್ರ— ಎಸ್ ವಿ ರಂಗರಾವ್, ಏಂ ಆರ್ ರಾಧ, ಎಸ್ ಎಸ್ ರಾಜೇಂದ್ರ ಸಾರಂಗಪಾಣಿ, ಎಂ ವಿ ರಾಜಮ್ಮ, ಸಂಧ್ಯ, ಮುತ್ತುಲಕ್ಷ್ಮಿ

[ದಿನವಹಿ 3 ಆಟಗಳು]

SHAKTI SUDHA

A Superb Tonic

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯಾ, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ತುಂಬಿದ ವಿಶೇಷ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯಧನವನ್ನು ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor, Dharma Prachara Nirata M. S. Krishna Rao, at the Sarvodaya Press Chamarajapuram, Mysore 4.